ಎಂಬುದನ್ನು ವಿಚಾರ ಮಾಡಿ.

ಶ್ರೀ ಗುರಪಾದಪ್ಪ ನಾಗಮಾರಪಲ್ಲಿ: ಗಸ್ತು ತಂಡ ಹೋಗುತ್ತಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ನಾನು ಗಸ್ತು ತಂಡ ಶೀಘ್ರವಾಗಿ ಹೋಗುವ ಹಾಗೆ ವ್ಯವಸ್ಥೆ ಮಾಡುತ್ತೇನೆ. ಇದೊಂದು. ಎರಡನೆಯದು ಪರಿಹಾರದ ವಿಚಾರ. ಎಷ್ಟು ನಷ್ಟ ಆಗಿದೆ ಅಷ್ಟು ಅಂದಾಜು ಮಾಡುವುದು ಬಹಳ ಮುಖ್ಯವಾಗಿದೆ, ಅದನ್ನು ಅಂದಾಜು ಮಾಡಿಸುತ್ತೇನೆ. ಪರಿಹಾರ ಎಷ್ಟು ಕೊಡುವುದಕ್ಕೆ ಸಾಧ್ಯ ಇದೆಯೋ ಅಷ್ಟನ್ನು ಕೊಡೋಣ. ಆದರೆ ಅಂದಾಜು ಮಾಡಿಸುವುದು ತಪ್ಪು ಮಾಡುವುದಿಲ್ಲ. ಇನ್ನೊಂದು ಮಾತು ಇಲ್ಲೇ ಘೋಷಣೆ ಮಾಡಿದ ಹಾಗೆ ಈ ಸದನದಲ್ಲಿ ಹೇಳುತ್ತೇನೆ. 25 ಸಾವಿರ ರೂಪಾಯಿ ಒಂದು ಆನೆ ತುಳಿತಕ್ಕೆ ಪರಿಹಾರ ಕೊಡತಕ್ಕದ್ದು ನಿಜ; ಹುಲಿ ತುಳಿತಕ್ಕೆ ಸಿಕ್ಕಿ ಸತ್ತರೆ 25 ಸಾವಿರ ರೂಪಾಯಿ ಪರಿಹಾರ ಕೊಡತಕ್ಕದ್ದು ನಿಜ. ಬೇರೆ ಎಲ್ಲಾದರೂ ಕಡೆ ಸತ್ತರೆ ಒಂದು ಲಕ್ಷ ರೂಪಾಯಿ ಪರಿಹಾರ ಕೊಡುತ್ತಾರೆ. ನಾನೂ ಕೂಡ ಒಂದು ಲಕ್ಷ ರೂಪಾಯಿ ಮಾಡಬೇಕೆಂದು ವಿಚಾರ ಬಂದಿದೆ, ಒಂದು ಲಕ್ಷ ರೂಪಾಯಿ ಮಾಡುತ್ತೇನೆ. ವಿಶೇಷವಾಗಿ ಸರ್ಕಾರದ ಕಡೆಯಿಂದ ಹೆಚ್ಚು ಅಂದರೆ ಒಂದು ಲಕ್ಷ ರೂಪಾಯಿ ಮಾಡುತ್ತೇನೆ. ಮತ್ತು 10 ಸಾವಿರ ರೂ. ಇರುವುದನ್ನು 20 ಸಾವಿರ ರೂ. ಮಾಡುತ್ತೇನೆ, ಐದು ಸಾವಿರ ರೂ. ಇದ್ದದ್ದನ್ನು ಹತ್ತು ಸಾವಿರ ರೂಪಾಯಿ ಮಾಡುತ್ತೇನೆ. ಒಂದಕ್ಕೆ ಎರಡು ಪ್ರಕಾರ ಮಾಡಿ ಒಳ್ಳೆಯ ರೀತಿಯಲ್ಲಿ ಜನಕ್ಕೆ ಸಹಾಯ ಮಾಡುವ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇನೆ. ಎಲ್ಲಿ ಆನೆ ತೊಂದರೆ ಇದ್ದರೂ ಅದನ್ನು ಹಿಡಿದು ಹಾಕಿಸುತ್ತೇನೆ.

716 (85) ಶ್ರೀ ಎನ್.ರಾಜಣ್ಣ (ವಿಧಾನಸಭಾ ಸದಸ್ಯರು):

ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) 1997ರ ಜನವರಿಯಿಂದ ಬೆಂಗಳೂರು ನಗರದ ವೃತ್ತಿಪರ ಕಾಲೇಜುಗಳಲ್ಲಿ ವರದಿಯಾಗಿರುವ ರ್‍ಯಾಗಿಂಗ್ ಪ್ರಕರಣಗಳೆಷ್ಟು;

(ಆ) ರಾಜ್ಯದಲ್ಲಿ ರ್‍ಯಾಗಿಂಗ್‌ನ್ನು ನಿಷೇಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೇ;

(ಇ) ಈ ದಿಸೆಯಲ್ಲಿ ಶಾಸನ ಅಳವಡಿಸಲು ಸರ್ಕಾರವು ಪರಿಶೀಲಿಸುತ್ತಿದೆಯೇ;

a) the number of ragging incidents reported in professional colleges from January 1997 in Bangalore city;

b) whether there is any act to ban ragging in the State;

c) will the Government consider to introduce a Legislation in this regard?

ಬಿ.ಸೋಮಶೇಖರ (ಉನ್ನತ ಶಿಕ್ಷಣ ಸಚಿವರು.)

(ಅ) ಒಂದು

(ಆ) ಈಗಾಗಲೇ ನಿಷೇಧಿಸಲಾಗಿದೆ.

(ಇ) 1983ರ ಕರ್ನಾಟಕ ಶಿಕ್ಷಣ ಅಧಿನಿಯಮದ 116ನೇ ಪ್ರಕರಣದಲ್ಲಿ ಈಗಾಗಲೇ ಉಪಬಂಧವನ್ನು

ಕಲ್ಪಿಸಲಾಗಿದೆ.

a) one

b) Already prohibited

c) provisions have already been made under section 116 of the karnataka Education Act, 1983

ಶ್ರೀ ಎನ್.ರಾಜಣ್ಣ: ಮಾನ್ಯ ಅಧ್ಯಕ್ಷರೆ, ಸರ್ಕಾರ ಶಾಸನ ಆಳವಡಿಸಲು ಪರಿಶೀಲಿಸುತ್ತಿದೆಯೇ ಎಂಬ ಪ್ರಶ್ನೆಗೆ 116 ಪ್ರಕರಣದಲ್ಲಿ ಈಗಾಗಲೇ ಉಪಬಂಧವನ್ನು ಕಲ್ಪಿಸಲಾಗಿದೆ ಎಂದು ಹೇಳಿದ್ದಾರೆ. ಇದರ ವಿವರವನ್ನು ಸಭೆಗೆ ತಿಳಿಸಬೇಕು. ಆಮೇಲೆ ಯಾರ್ಯಾರು ಸ್ಟೂಡೆಂಟ್ಸ್ ಈ ರ್ಯಾಗಿಂಗ್‌ನಲ್ಲಿ ನಮ್ಮ ರಾಜ್ಯದವರೋ ಅಥವಾ ಬೇರೆ ರಾಜ್ಯದವರೂ ಭಾಗಿ ಆಗಿದ್ದಾರೋ ಎಂಬುದನ್ನು ತಿಳಿಸಬೇಕು. ಇಂತಹವರಿಗೆ ಸೀರಿಯಸ್ ರಿಮಾರ್ಕ್‌ನ್ನು ಅವರ ಪ್ರಮಾಣ ಪತ್ರದಲ್ಲಿ ನಮೂದಿಸಿ ಒಂದೇ ಬಾರಿಗೆ ಅವರನ್ನು ಕಾಲೇಜಿನಿಂದ ಹೊರಗಡೆ ಕಳುಹಿಸುವ ಬಗ್ಗೆ ಸರ್ಕಾರದ ಚಿಂತನೆ ಏನಾದರೂ ಮಾಡಿದೆಯಾ? ಎರಡನೆಯದು ರೀಸೆಂಟಾಗಿ ಒಂದು ಬಾಯ್ ಸ್ಟೂಡೆಂಟ್ ಮತ್ತು ಒಂದು ಗರ್ಲ್ ಸ್ಟೂಡೆಂಟ್ ಅನ್ನು ಬಿಜಾಪುರದ ಒಂದು ಕಾಲೇಜಿನ ಕೊಠಡಿಯಲ್ಲಿ ಕೂಡಿ ಹಾಕಿದ್ದರು. ಅದರಲ್ಲಿ ಬಾಯ್ ಸ್ಟೂಡೆಂಟ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ವಿದ್ಯಾರ್ಥಿಗಳಲ್ಲಿ ಭಯ ಮೂಡತಕ್ಕ ಏನಾದರೂ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ಕಾರ ಚಿಂತನೆ ಮಾಡಿದೆಯೆ ಎನ್ನುವುದನ್ನು ತಮ್ಮಲ್ಲಿ ಕೇಳುತ್ತಿದ್ದೇನೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ಸರ್ಕಾರ ಈ ವಿಚಾರದಲ್ಲಿ ಏನೇನು ಕ್ರಮ ತೆಗೆದುಕೊಂಡಿದೆ ಎಂದು ಹೇಳಬಯಸುತ್ತೇನೆ. ನಾವು ಸರ್ಕಾರದವರು; ಎರಡು ತಿಂಗಳ ಹಿಂದೆ 1983ರ ಶಿಕ್ಷಣ ಕಾಯಿದೆ ಅಡಿಯಲ್ಲಿ 116ನೇ ಕಾಲಂ ಪ್ರಕಾರ ಈ ರ್ಯಾಗಿಂಗ್ ಅನ್ನು ನಿಷೇಧ ಮಾಡತಕ್ಕ ಅವಕಾಶ ಇದೆ, ಮಾಡಿದ್ದೇವೆ. ಈ ಕಾಯಿದೆ ಅಡಿಯಲ್ಲಿ ಈಗಾಗಲೇ ಎಲ್ಲಾ ಕಾಲೇಜುಗಳಿಗೆ ಒಂದು ತಂಡವನ್ನು ನೇಮಕ ಮಾಡಿದ್ದೇವೆ. ಅಂದರೆ ವೃತ್ತಿ ಪರ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು ಇರಬಹುದು, ಮೆಡಿಕಲ್, ಡೆಂಟಲ್ ಕಾಲೇಜುಗಳು ಆಗಿರಬಹುದು. ಯಾವುದೇ ಕಾಲೇಜುಗಳು ಆಗಿರಬಹುದು. ರ್ಯಾಗಿಂಗ್ ಅನ್ನು ಸಂಪೂರ್ಣವಾಗಿ ನಿಷೇಧ ಮಾಡಬೇಕು ಎಂದು ಹೇಳಿ ನಾವು ಒಂದು ತಂಡವನ್ನು ನೇಮಕ ಮಾಡಿದ್ದೇವೆ. ಆ ಸ್ಕ್ವಾಡ್ ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಇರುತ್ತದೆ. ಅಲ್ಲಿ ಸಂಬಂಧಪಟ್ಟಂತಹ ವಾರ್ಡನ್ ಇರುತ್ತಾರೆ, ಸೀನಿಯರ್ ಪ್ರೋಫೆಸರ್‌ಗಳು ಇರುತ್ತಾರೆ. ಮತ್ತು ಆ ವ್ಯಾಪ್ತಿಗೆ ಬರತಕ್ಕಂಥ ಪೋಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಸಹ ಇರುತ್ತಾರೆ. ನಾವು ಇವರಿಗೆ ಏನು ಹೇಳಿದ್ದೇವೆ ಎಂದರೆ ಪ್ರತಿ ವಾರ ನೀವು ಮೀಟ್ ಮಾಡಲೇಬೇಕಾಗುತ್ತದೆ. ಕಾಲೇಜಿನಲ್ಲಿ ರಿವ್ಯೂ ಮಾಡಬೇಕು. ಯಾವುದೇ ಪ್ರಕರಣಗಳು ನಿಮ್ಮ ಗಮನಕ್ಕೆ ಬಂದ ತಕ್ಷಣ ಅಲ್ಲಿ ಕೇಸ್ ರಿಜಿಸ್ಟರ್ ಮಾಡಬೇಕು. ಆ ವಿದ್ಯಾರ್ಥಿಯನ್ನು ಸಸ್ಪೆಂಡ್

ಅಧ್ಯಕ್ಷರು: ಪ್ರೈವೇಟ್ ಕಾಲೇಜುಗಳಲ್ಲಿ ಮೆರಿಟ್ ಕೋಟಾದ ಮೇಲೆ ಹೋಗಿರತಕ್ಕಂಥ ಮಕ್ಕಳು ರ್ಯಾಗಿಂಗ್ ಮಾಡುವುದಿಲ್ಲ. ಸೊಕ್ಕಿನಿಂದ ಮೆರೆಯತಕ್ಕಂಥ ಶ್ರೀಮಂತರ ಮಕ್ಕಳೇ

ಇದನ್ನು ಮಾಡುವುದು. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಮ್ಯಾನೇಜ್‌ಮೆಂಟಿಗೆ ಇಷ್ಟವಿರುವುದಿಲ್ಲ. ಆಡವರ್ಸ್ ಪಬ್ಲಿಸಿಟಿ ಆಗುತ್ತದೆ, ಡೊನೇಷನ್ ಕೊಟ್ಟು ಬೇರೆಯವರು ಬರುವುದಿಲ್ಲವೆಂದು. ಆದ್ದರಿಂದ, ವಾತಾವರಣ ಕಲುಷಿತವಾಗುತ್ತಿದೆ. ನೀವು ಮನೆಗೆ ಎಷ್ಟು ಜನರನ್ನು ಕಳಿಸಿದ್ದೀರಿ? ಎಷ್ಟು ಕಾಲೇಜುಗಳಲ್ಲಿ ರಾಜ್ಯದಲ್ಲಿ ರ‍್ಯಾಗಿಂಗ್ ಮಾಡತಕ್ಕಂಥ ಹುಡುಗರನ್ನು ರಾಜ್ಯದಿಂದ ಹೊರಗೆ ಕಳಿಸಿದ್ದೀರಿ? ಕಾಲೇಜ್ ಅಡ್ಮಿಷನ್ ಕ್ಯಾನ್ಸಲ್ ಮಾಡಿದ್ದೀರಿ?

ಶ್ರೀ ಬಿ.ಸೋಮಶೇಖರ್:- ಮಾನ್ಯ ಸಭಾಧ್ಯಕ್ಷರೆ, ಮೊನ್ನೆ ಹುಬ್ಬಳ್ಳಿಯಲ್ಲಿ ಒಂದು ಪ್ರಕರಣ ನನ್ನ ಗಮನಕ್ಕೆ ಬಂತು. ಆ ಮ್ಯಾನೇಜ್‌ಮೆಂಟಿನವರು ಅದರ ಬಗ್ಗೆ ಕ್ರಮ ತೆಗೆದುಕೊಂಡಿರಲಿಲ್ಲ. ನಾವು ತಕ್ಷಣ ಪ್ರಿನ್ಸಿಪಾಲರಿಂದ ನೇರವಾಗಿ ವರದಿಯನ್ನು ತರಿಸಿಕೊಂಡು ಎಸ್.ಪಿ. ಮತ್ತು ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿ ನೇರವಾಗಿ ವಿದ್ಯಾರ್ಥಿಗಳನ್ನು ಸಸ್ಪೆಂಡ್‌ಮಾಡಿಸಿ ಕೇಸು ದಾಖಲು ಮಾಡಿದ್ದೇವೆ.

ಅಧ್ಯಕ್ಷರು:- ನೀವು ಏನುಕಮಿಟಿ ಕಾನ್ಸಿಟ್ಯೂಟ್ ಮಾಡಿದ್ದೀರಿ ಅವರಿಗೇ ವೆಸ್ಟಡ್ ಇಂಟರೆಸ್ಟ್ ಇದೆ. ನೀವು ಯಾರನ್ನು ಇನ್‌ಕಾರ್ಪೊರೇಟ್ ಮಾಡಿದ್ದೀರಿ, ಕಮಿಟೀಸ್ ಕಾನ್ಸಿಟಿಟ್ಯೂಟ್ ಮಾಡಿದ್ದೀರಿ, ಅವರಿಗೇ ದೆವಾಂಟ್ ಟು ಡಿಪೆಂಡ್ ದಿಸ್ ಫೈರ್. ಸರ್ಕಾರದ ನಿಯಮಾವಳಿಗಳ ಪ್ರಕಾರ, ಸಿ ಇ ಜಿ ಸೆಲ್ ಮುಖಾಂತರ ಬಡವರು, ಮೆರಿಟ್ ಮೇಲೆ ತೆಗೆದುಕೊಂಡಿರತಕ್ಕಂಥವರನ್ನು ಬುದ್ಧಿವಂತರಿದ್ದರೂ ಕೂಡ ಅವರನ್ನು ಇವರು ಶ್ರೀಮಂತರು ಎನ್ನುವ ಕಾರಣದಿಂದ ಹೀಯಾಳಿಸುತ್ತಾರೆ, ಗೋಳಾಡಿಸುತ್ತಾರೆ, ಮಾನಸಿಕವಾಗಿ ಹಿಂಸೆ ಕೊಡುತ್ತಾರೆ. ಇದರಿಂದ, ಆ ವಾತಾವರಣವೆಲ್ಲಾ ಹಾಳಾಗುತ್ತದೆ. ಇಟೀಸ್ ಫಾರ್ ದಟ್ ರೀಸನ್. ಸೊಕ್ಕಿನಿಂದ ಮೆರೆಯತಕ್ಕಂಥವರನ್ನು ಅಲ್ಲಿಂದ ಹೊರಕ್ಕೆ ಹಾಕಬೇಕು ಎಂದು ನಾವು ಹೇಳುವುದು.

ಶ್ರೀ ಬಿ.ಸೋಮಶೇಖರ್:- ಆದರೆ, ಈ ವರ್ಷ ನಮ್ಮ ರಾಜ್ಯದಲ್ಲಿ ಕಾಣಿಸುತ್ತಾ ಇಲ್ಲ. ಮ್ಯಾನೇಜ್‌ಮೆಂಟ್‌ನವರು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತಾರೆ. ಆದರೆ, 2-3 ಪ್ರಕರಣದಲ್ಲಿ ಕ್ರಮ ತೆಗೆದುಕೊಂಡಿಲ್ಲವೆಂದು ಗೊತ್ತಾದ ತಕ್ಷಣ, ನೇರ ಕ್ರಮ ತೆಗೆದುಕೊಂಡು ವಿದ್ಯಾರ್ಥಿಗಳನ್ನು ಸಸ್ಪೆಂಡ್ ಮಾಡಿಸಿದ್ದೇವೆ ಮತ್ತು ಕೇಸನ್ನು ದಾಖಲು ಮಾಡಿದ್ದೇವೆ. ಈಗಾಗಲೇ ಎಷ್ಟೋ ಭಯದ ವಾತಾವರಣ ಹೋಗಿದೆ. ಇದರ ಜೊತೆಗೆ, ನಾವೂ ಕೂಡ ಈ ತಂಡಕ್ಕೆ ರೆಸ್ಪಾನ್ಸಿಬಿಲಿಟಿ ಕೊಟ್ಟಿದ್ದೇವೆ.

ಶ್ರೀ ಎಸ್.ಸುರೇಶ್ ಕುಮಾರ್:- ತಾವು ಬಹಳ ಸರಿಯಾಗಿ ಹೇಳಿದ್ದೀರಿ. ಶ್ರೀಮಂತರ ಸೊಕ್ಕಿನ ಆಟವಿದು. ಆ ಹುಡುಗರು ಯಾರು ಕ್ಯಾಪಿಟೇಷನ್ ಕೊಟ್ಟು ಹೋಗುತ್ತಾರೆ, ಅವರು ಪೋಲೀಸಿನವರಿಗೆ ಹೆದರುವುದಿಲ್ಲ, ಕಾನೂನಿಗೆ ಹೆದರುವುದಿಲ್ಲ, ಶಿಕ್ಷಕರಿಗೆ ಹೆದರುವುದಿಲ್ಲ, ಗುರು-ಹಿರಿಯವರಿಗೆ ಹೆದರುವುದಿಲ್ಲ, ದೇವರಿಗೂ ಹೆದರುವುದಿಲ್ಲ, ಅವರು ಹೆದರುವುದು ಏಡ್ಸ್ ಕಾಯಿಲೆಗೆ ಮಾತ್ರ. ನಾನು ಬಹಳ ದುಃಖದಿಂದ ಹೇಳುತ್ತೇನೆ. ಯಾರೂ ಕೂಡ ಹೆದರುವುದಿಲ್ಲ. ಎಲ್ಲರೂ ಮ್ಯಾನಿಪ್ಯುಲೇಟ್ ಮಾಡಬಹುದು ಎಂದು. ಸನ್ಯಾಸ ಸಚಿವರಲ್ಲಿ ಕೇಳುವುದು ಏನೆಂದರೆ, ಬರೀ ಈ ರೀತಿ ಪ್ರೊಫೆಷನಲ್ ಕಾಲೇಜುಗಳಲ್ಲಿ ಆಗುತ್ತಿರುವಾಗ ತಾವೊಂದು ಲೆಜಿಸ್‌ಲೇಷನ್ ತಂದುಬಿಟ್ಟು ಎಷ್ಟರಮಟ್ಟಿಗೆ ಹಾಕುತ್ತೀರೋ ನನಗೆ ಗೊತ್ತಿಲ್ಲ.

ಇವೊತ್ತು ಒಂದು ಆ ಸ್ಟಾಟಿಸ್ಟಿಕ್ ಅಟ್‌ಮಾಸ್‌ಫಿಯರ್ ಏನಿದೆ, ಬ್ಯಾನ್ ಹೋಂಗ್, ಹೆರಾಸ್‌ಮೆಂಟ್‌ಗೆ ಮಧ್ಯೆ ಇವತ್ತು ಡಿವೈಡಿಂಗ್ ಲೈನ್ ಇಲ್ಲ. ಇದನ್ನು ಕೊನೆಗೊಳಿಸುವುದಕ್ಕೆ ಈ ಲೆಜಿಸ್‌ಲೇಷನ್ ಜೊತೆಗೆ ಆ ಕಾಲೇಜ್ ಪ್ರಿನ್ಸಿಪಾಲ್‌ಗೆ, ವಾರ್ಡನ್‌ಗಳಿಗೆ ಯಾವ ರೀತಿ ಒಂದು ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ನೀವು ಆದೇಶ ಕೊಡುತ್ತೀರಿ?

ಶ್ರೀ ಬಿ.ಸೋಮಶೇಖರ್:- ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ನಾವು ಒಂದೊಂದು ಕಾಲೇಜುವಾರು ತಂಡಗಳನ್ನು ನೇಮಕ ಮಾಡಿದ್ದೇವೆ. ಏಕೆಂದರೆ, ಆ ಕಾಲೇಜುಗಳ ಆವರಣದಲ್ಲಿರಬಹುದು ಅಥವಾ ಹೊರಗಡೆ ಇರಬಹುದು. ಅಲ್ಲಿ ಯಾವುದೇ ಅಂಥದ್ದು ರ್‍ಯಾಗಿಂಗ್ ನಡೆದರೆ, ಆ ತಂಡದವರು ತಕ್ಷಣ ಆ ವಿದ್ಯಾರ್ಥಿ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಆ ತಂಡದಲ್ಲಿ ಪ್ರಿನ್ಸಿಪಾಲ್ ಇರುತ್ತಾರೆ. ಅವರನ್ನು ನಾವು ಜವಾಬ್ದಾರರನ್ನಾಗಿ ಮಾಡಿದ್ದೇವೆ. ಅದಾದ ಮೇಲೆ, ಕಾಲೇಜ್ ಹಾಸ್ಟೇಲ್ ವಾರ್ಡನ್ ಇರುತ್ತಾರೆ, ಪ್ರೋಫೆಸರ್ ಇರುತ್ತಾರೆ, ಮತ್ತು ವಿದ್ಯಾರ್ಥಿ ಮುಖಂಡರಿರುತ್ತಾರೆ. ಮತ್ತೆ ಆ ವ್ಯಕ್ತಿಯ ಪೋಲೀಸ್ ಠಾಣೆಯ ಸಬ್ ಇನ್ಸಪೆಕ್ಟರ್ ಇರುತ್ತಾರೆ. ಅವರಿಗೆ ನಾವು ಏನು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲು ಹೇಳಿದ್ದೇವೆ ಎಂದರೆ, ಪ್ರತಿ ಶನಿವಾರ ನೀವೊಂದು ಮೀಟಿಂಗ್ ಮಾಡಬೇಕು ಮತ್ತು ಏನು ಆದೇಶ ಹೊರಡಿಸಿದ್ದೇವೋ, ಆ ಆದೇಶವನ್ನು ನೀವು ನೋಟೀಸ್ ಬೋರ್ಡ್‌ನಲ್ಲಿ ಹಾಕಬೇಕು, ಪ್ರತಿ ವಾರ ಮೀಟಿಂಗ್ ಮಾಡಬೇಕು ಎಂದು. ಪ್ರತಿ ವಾರ ರ್‍ಯಾಗಿಂಗ್ ಕಮಿಟಿ ಮೀಟಿಂಗ್ ನಡೆಯುತ್ತಿದೆ ಎಂದು ಗೊತ್ತಾದಾಗ, ವಿದ್ಯಾರ್ಥಿಗಳಲ್ಲಿ ಭಯದ ವಾತಾವರಣ ಬರುತ್ತದೆ. ನೀವು ಯಾರಾದರೂ ಒಂದು ಪ್ರಕರಣ ನಡೆಯಿತೆಂದು ಬುಕ್ ಮಾಡಿದ ತಕ್ಷಣ ನಾವು ಕ್ರಯ ತೆಗೆದುಕೊಳ್ಳುತ್ತೇವೆ. ನನಗೆ ಸಂತೋಷವಾಗುತ್ತಿದೆ, ಈ ವರ್ಷದಲ್ಲಿ ಬೇರೆ ಯಾವುದೇ ವರ್ಷ ಇಷ್ಟು ಕಟ್ಟು ನಿಟ್ಟಿನ ಕ್ರಮವನ್ನು ತೆಗೆದುಕೊಂಡಿರಲಿಲ್ಲ. ಈಗಾಗಲೇ ನಮ್ಮ ಆಕ್ಟ್ ಏನಿದೆ, ಶಿಕ್ಷಣ ಮಸೂದೆ ಏನಿದೆ ಅದರ ಸೆಕ್ಷನ್ 116ರ ಪ್ರಕಾರ, ರ್‍ಯಾಗಿಂಗ್‌ನ್ನು ಸಂಪೂರ್ಣವಾಗಿ ನಿಷೇಧ ಮಾಡತಕ್ಕಂಥ ಅವಕಾಶವಿದೆ. ಅದನ್ನು ರೂಲ್ಸ್ ಮಾಡಿ ಇಶ್ಯೂ ಮಾಡಿದ್ದೇವೆ. ಜೊತೆಗೆ, ಇನ್ನೊಂದು ವಿಷಯವೆಂದರೆ, ಪೋಲೀಸ್‌ನ ಇಲಾಖೆಯ ಡಿಜಪಿಯವರು ಸ್ಟಾಂಡಿಂಗ್ ಆರ್ಡರನ್ನು ಎಲ್ಲಾ ಪೋಲೀಸ್ ಠಾಣೆಗಳಿಗೂ ಕೊಟ್ಟಿದ್ದಾರೆ. ಅದರಲ್ಲಿ ಎಲ್ಲಾ ಹೇಳಿದ್ದಾರೆ. ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು. ನಾನು ಹೇಳುತ್ತಿದ್ದೇನೆ, ಈ ವರ್ಷ ಬೇರೆ ಯಾವುದೇ ವರ್ಷಗಳಲ್ಲಿಲ್ಲದಿದ್ದಂಥ 2-3 ಪ್ರಕರಣಗಳು ಆಗಿವೆ. ಅಂತಹ ಕಡೆ ಕ್ರಮ ತೆಗೆದುಕೊಂಡಿದ್ದೇವೆ. ವಿದ್ಯಾರ್ಥಿಗಳನ್ನು ಸಸ್ಪೆಂಡ್ ಮಾಡಿದ್ದೇವೆ. ಆಮೇಲೆ, ಏನಾದರೂ ಒಂದು ವೇಳೆ ಕಾಲೇಜುಗಳ ಮಾನ್ಯತೆ ರದ್ದು ಮಾಡುವ ಬಗ್ಗೆ ಪರಿಶೀಲನೆ ಮಾಡಬೇಕೆಂದು ಈಗಾಗಲೇ ಲಾ ಡಿಪಾರ್ಟ್‌ಮೆಂಟಿನವರು ಚರ್ಚೆ ಮಾಡುತ್ತಿದ್ದಾರೆ. ಕಾನೂನಿನಲ್ಲೇನಾದರೂ ಅವಕಾಶವಿದ್ದರೆ ಆದೇಶ ಮಾಡುವುದಕ್ಕೂ ಹಿಂಜರಿಯುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೆ, ಈ ಸಮಿತಿ ಬಗ್ಗೆ ನಾನು ಒಂದೆರಡು ಮಾತು ಆಡಬೇಕಾಗಿದೆ. ಮಾನ್ಯ ಮಂತ್ರಿಗಳು ಹೇಳುವ ಪ್ರಕಾರ, ಆ ಕಾಲೇಜಿನ ಪ್ರಿನ್ಸಿಪಾಲ್,ವಾರ್ಡನ್,ವಿದ್ಯಾರ್ಥಿ ನಾಯಕರು ಯಾವುದೇ ಖಾಸಗಿ ಕಾಲೇಜಿನ ಪ್ರಿನ್ಸಿಪಾಲರೊಬ್ಬರು ಮ್ಯಾನೇಜ್‌ಮೆಂಟ್ ವಿರುದ್ಧವಾಗಿ ತನ್ನ ಅಭಿಪ್ರಾಯವನ್ನು ಕೊಡಲಿಕ್ಕೆ ಸಾಧ್ಯವಿಲ್ಲ. ಆಯಾಯ ಹಾಸ್ಟೆಲ್ ವಾರ್ಡನ್‌ದೂ ಅದೇ ಪರಿಸ್ಥಿತಿ. ಆ ಕಾಲೇಜುಗಳಲ್ಲಿ, ಶಾಲೆಗಳಲ್ಲಿ.....

**MR.SPEAKER**: I said it.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಆ ವಿದ್ಯಾರ್ಥಿ ನಾಯಕರು ಯಾರೆಂದರೆ, ಸೊಕ್ಕಿನ ಗುಂಪಿದೆಯೆಲ್ಲಾ, ಶ್ರೀಮಂತರ ಮನೆಯಿಂದ ಬಂದವರೇ ಅಲ್ಲಿ ವಿದ್ಯಾರ್ಥಿ ನಾಯಕರು. ಅವರೆಲ್ಲರೂ ತಂಡದಲ್ಲಿದ್ದರೆ ಏನಾಗಬಹುದು? ಈ ತಂಡದ ವರದಿ ಏನಾಗಬಹುದು? ಎನ್ನುವುದನ್ನು ಯೋಚನೆ ಮಾಡಬೇಕು.

ಶ್ರೀ ಬಿ. ಸೋಮಶೇಖರ್:- ಒಂದ್ನಿಮಿಷ. ಆ ಕಮಿಟಿಯಲ್ಲಿ ಯಾರ್ಯಾರು ಇರಬೇಕೆಂದು ಹೇಳಿ; ಇವತ್ತು ನಾನು ಸೇರಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಾನು ಅಧ್ಯಕ್ಷರ ಅನುಮತಿ ಪಡೆದು ಮಾತನಾಡುತ್ತಿದ್ದೇನೆ.

ಶ್ರೀ ಬಿ.ಸೋಮಶೇಖರ್:- ನೀವು ಹೇಳುವುದರ ಅರ್ಥ ಗೊತ್ತಾಯಿತು ರೆಡ್ಡಿಯವರೆ.

ಅಧ್ಯಕ್ಷರು:- ಮಂತ್ರಿಗಳು ಏನು ಹೇಳುತ್ತಾರೆಂದರೆ, ನಿಮ್ಮ ಕಳಕಳಿ ಅರ್ಥವಾಯಿತು. ಆ ಕಮಿಟಿಯನ್ನು ರಿವೈಸ್ ಮಾಡಿಲಿಕ್ಕೆ ಇನ್ನೂ ಯಾರಿರಬೇಕೆಂದು ಹೇಳಿ ನಾನು ಇವತ್ತೇ ಮಾಡುತ್ತೇನೆಂದು ಹೇಳುತ್ತಿದ್ದಾರೆ.

ಶ್ರೀ ಬಿ.ಸೋಮಶೇಖರ್:- ಆ ಕಮಿಟಿಯನ್ನು ನಾವು ಬೇಕಾಬಿಟ್ಟಿಯಿಂದ ಮಾಡಿಲ್ಲ. ಬಹಳ ಸೀರಿಯಸ್ ಆಗಿ ಮನಸ್ಸು ಮಾಡಿ ಮಾಡಿದ್ದೇವೆ.

ಅಧ್ಯಕ್ಷರು:- ಅವರ ಸಲಹೆಯನ್ನು ಕೇಳೋಣ. ನಿಮ್ಮ ಸಲಹೆಯನ್ನು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಇವರು ಯಾರನ್ನು ಆ ಕಮಿಟಿಯಲ್ಲಿ ಹಾಕದ ಕೆಲವು ಮಹಿಳೆಯರನ್ನು ಹಾಕಬೇಕು. ಪ್ರಾಮಾಣಿಕವಾಗಿರತಕ್ಕಂಥ ಸಂಘ-ಸಂಸ್ಥೆಗಳ ಮಹಿಳೆಯನ್ನು ಹಾಕಬೇಕು, ಪ್ರಗತಿಪರವಾಗಿ, ಜನರ ಪರವಾಗಿ ಆಲೋಚನೆ ಮಾಡತಕ್ಕಂಥ, ವಿದ್ಯಾಭ್ಯಾಸದ ಬಗ್ಗೆ ಕಾಳಜಿ ಇರತಕ್ಕಂಥ, ವಿದ್ಯಾತಜ್ಞರನ್ನು ಅದಕ್ಕೆ ಹಾಕಬೇಕು. ಮತ್ತೆ, ಆ ಯಾವುದೇ ಸಂಘ-ಸಂಸ್ಥೆಗಳಿಗೆ ಸಂಬಂಧಪಡದಿರತಕ್ಕಂಥವರನ್ನು ಅದಕ್ಕೆ ಹಾಕಿದರೆ, ಆಗ ಈ ಸಮಸ್ಯೆ ಪರಿಹಾರವಾಗಬಹುದು. ಇಲ್ಲದಿದ್ದರೆ, ಆ ಕಾಲೇಜಿನ ಪ್ರಿನ್ಸಿಪಾಲ್....

ಅಧ್ಯಕ್ಷರು:- MR.SPEAKER: He is agreeable.

ಶ್ರೀ ಬಿ.ಸೋಮಶೇಖರ್:- ಸನ್ಮಾನ್ಯ ಅಧ್ಯಕ್ಷರ, ನಮ್ಮ ಸರ್ಕಾರದ ಉದ್ದೇಶವೇನೆಂದರೆ, ಈ ರ್ಯಾಗಿಂಗ್‌ನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂಬುದು. ಇದರಲ್ಲಿ ನಾವು ತಕ್ಷಣಕ್ಕೆ ಏನು ಈ ಕಮಿಟಿ ಮಾಡಿದ್ದೇವೆ, ತಾವು ಹೇಳಿದ್ದು ಸೂಕ್ತವಾಗಿ ಕಂಡರೆ ಅವರಲ್ಲಿ ಕೆಲವರು ನಾನ್‌ಪೊಲಿಟಿಕಲ್ ಆರ್ಗನೈಷೇಷನ್ ಇದ್ದಾರೆ ಅವರ ಜೊತೆ ಮಾಡಿ ಮತ್ತೆ ರಿಕಾಸೆಸ್ಟಿಟ್ಯೂಟ್ ಮಾಡಿದ್ದೀರಿ ಒಂದು ವಾರದೊಳಗೆ ನಮಗೆ ರಿಪೋರ್ಟ್ ಕಳುಹಿಸಿಕೊಡಬೇಕು. ಕಾನ್‌ಸ್ಟಿಟ್ಯೂಟ್ ಮಾಡದಿದ್ದರೆ, ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನತಕ್ಕಂಥ ಕಟ್ಟುನಿಟ್ಟಿನ ಆದೇಶ ಕೊಡುತ್ತೇನೆ. ಇದನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂಬುದೇ ನಮ್ಮ ಸರ್ಕಾರದ ಉದ್ದೇಶ. ಇಡೀ ಕರ್ನಾಟಕದಲ್ಲಿ ಯಾವುದೇ ರ್ಯಾಗಿಂಗ್ ನಡೆಯಬಾರದೆಂಬುದೇ ನಮ್ಮ ಉದ್ದೇಶ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಸನ್ಮಾನ್ಯ ಅಧ್ಯಕ್ಷರೆ, ರ್‍ಯಾಗಿಂಗ್ ಬಗ್ಗೆ ನನ್ನ ಒಂದೆರಡು ಸಲಹೆಗಳಿವೆ. ಕಾಲೇಜಿಗೆ ಅಪ್ಲಿಕೇಷನ್ ಹಾಕುವಾಗಲೇ ಒಂದು ಕಾಲಂನಲ್ಲಿ, ರ್‍ಯಾಗಿಂಗ್ ಮಾಡಿದವರ ಮೇಲೆ ಯಾವ ಯಾವ ತರಹದ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ ಅವರ ಸೈನ್ ಹಾಕಿಸಬೇಕು. ಎರಡನೆಯದು, ಕಾಲೇಜಿನಲ್ಲಿ ರ್‍ಯಾಗಿಂಗ್ ವಿಷಯದಲ್ಲಿ ದೊಡ್ಡಫಲಕಗಳ ಮೂಲಕ ಅಲ್ಲಿ ಬೋರ್ಡ್ ಹಾಕಬೇಕು ಇವೆರಡನ್ನೂ ಸೀರಿಯಸ್ ಆಗಿ ಮಾಡಿದರೆ, ಅವರಿಗೆ ಬರುವಾಗಲೇ ಭಯ ಸೃಷ್ಟಿಯಾಗುತ್ತದೆ.

ಶ್ರೀ ಬಿ. ಸೋಮಶೇಖರ್:- ಪ್ರೊಫೆಸರ್ ಸಿ ಇ ಜಿ ಕಾಲೇಜಿಗೆ ಪ್ರವೇಶ ಶುರುವಾಯಿತು. ಆ ಕಾಲೇಜು ಪ್ರಾರಂಭವಾಗುವುದಕ್ಕೆ ಮೊದಲೇ ನಾವು ಈ ಆದೇಶ ಹೊರಡಿಸಿರುವುದರಿಂದ, ಎಲ್ಲಾ ಕಾಲೇಜಿನ ಫಲಕಗಳ ಮೇಲೆ ಹಾಕಬೇಕೆಂದು ಹೇಳಿದ್ದೇವೆ, ಹಾಕಿದ್ದಾರೆ, ಹಾಕದೇ ಇದ್ದರೆ ಹಾಕಬೇಕೆಂದು ಹೇಳಿದ್ದೇವೆ. ಮತ್ತೆ ರಿಮೈಂಡರ್ ಕೊಡುತ್ತೇವೆ. ಜೊತೆಗೆ, ಸೆಕ್ಷನ್ 116 ಎಜುಕೇಷನ್ ಆಕ್ಟ್ ಪ್ರಕಾರ, ಅದು ಅಪ್ಲಿಕೇಷನ್ ಇರಲೇಬೇಕೆಂದು ಇದೆ. ನೇರವಾಗಿ ಕ್ರಮ ತೆಗೆದುಕೊಳ್ಳಬಹುದು. ನಾವು ಈ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್.ರಾಜಣ್ಣ:- ಇವರಲ್ಲಿ ಪೇರೆಂಟ್ಸ್‌ನ್ನು ಇನ್‌ವಾಲ್ವ್‌ಮಾಡಬೇಕು. ಹೌದು ಹಣವಂತರಿಗೆ ಈಕಷ್ಟ ಗೊತ್ತಾಗುತ್ತಿಲ್ಲ. ಇದನ್ನು ಹಣವಂತರ ಮಕ್ಕಳೇ ಮಾಡುವುದು. ಪೇರೆಂಟ್ಸ್ ಆಲ್ಸೋ ರೆಸ್ಪಾನ್ಸಿಬಲಿ.

ಶ್ರೀ ಬಿ. ಸೋಮಶೇಖರ್:- ಯಾವ ತಂದೆ-ತಾಯಿಗಳು ತಮ್ಮ ಮಕ್ಕಳಿಗೆ ಹೇಳಿ ಕಳುಹಿಸುವುದಿಲ್ಲ. ಅವರು ಆ ಏಜ್‌ನಲ್ಲಿ ಆ ತರಹದ ತಪ್ಪುಗಳನ್ನು ಮಾಡುತ್ತಾರೆ. ಆದ್ದರಿಂದ, ಅವರಿಗೆ ಬುದ್ಧಿ ಕಲಿಸಬೇಕೇ ಹೊರತು ತಂದೆ-ತಾಯಿಗಳನ್ನು ಏಕೆ ನಾವು ಜವಾಬ್ದಾರರನ್ನಾಗಿ ಮಾಡಬೇಕು.

ಅಧ್ಯಕ್ಷರು:- ರಾಜಣ್ಣನವರೇ, ಹೀಗೆಲ್ಲಾ ಮಾಡಿದರೆ ನೀವು ನಾವು ಮಾಡಿರುವ ಕೆಲಸಗಳಿಗೆ ನಮ್ಮ ಪೇರೆಂಟ್ಸ್‌ಗಳಿಗೂ ಶಿಕ್ಷೆ ಕೊಡಬೇಕಾಗುತ್ತದೆ.

779 ಶ್ರೀ ರಾಮಲಿಂಗಾ ರೆಡ್ಡಿ :

ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಜಯನಗರದಲ್ಲಿರುವ ನಗರ ಕೇಂದ್ರ ಗ್ರಂಥಾಲಯವನ್ನು ಎರಡನೆ ಶನಿವಾರ ಸೋಮವಾರ ಹಾಗೂ ಇತರೆ ಸರ್ಕಾರಿ ರಜಾ ದಿನಗಳಲ್ಲಿ ಮುಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ, ರಜಾ ದಿನಗಳಲ್ಲಿ ನಾಗರೀಕರಿಗೆ ಅನುಕೂಲವಾಗಲು ಈ ಗ್ರಂಥಾಲಯವನ್ನು ತೆರೆಯಲು ಸರ್ಕಾರವು ಕ್ರಮ ಕೈಗೊಳ್ಳುತ್ತದೆಯೇ?

ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು.)